ಬಂದಿದ್ದಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಇದುವರೆವಿಗೂ ತೆಗೆದುಕೊಳ್ಳದಿದ್ದಲ್ಲಿ, ಇನ್ನು ಮುಂದಾದರೂ ರೈತರ ಹಿತದೃಷ್ಟಿಯಿಂದ ದೊಡ್ಡ ಕೆರೆಗಳ ಹೂಳು ತೆಗೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ, (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಬಂದಿದೆ.

ಆ) ಈ ಕೆರೆಗಳ ಹೂಳನ್ನು ತೆಗೆಯುವ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಇವುಗಳು ಪರಿಶೀಲನಾ ಹಂತದಲ್ಲಿದೆ.

ಇ) ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಪರಿಶೀಲಿಸಲಾಗುವುದು.

ರೈತರಿಗೆ ಗೊಬ್ಬರ ವಿತರಣೆ ಮಾಡುವ ಬಗ್ಗೆ

524 ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ರೈತರಿಗೆ ಸರಿಯಾಗಿ ಗೊಬ್ಬರ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆಗ್ರೋ ಕೇಂದ್ರ ಮತ್ತು ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಫೆಡರೇಷನ್ ಇವೆರಡೂ ವ್ಯವಸ್ಥಿತವಾಗಿ ಗೊಬ್ಬರ ವಿತರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದರೆ ಈ ಬಗ್ಗೆ ಕೈಗೊಂಡ ಕ್ರಮಗಳಾವುವು)?

ಈ) ಮಂಡ್ಯ ಜಿಲ್ಲೆಯಲ್ಲಿ ಗೊಬ್ಬರ ವಿತರಣೆಯಾಗದಿರುವ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದು ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ, (ಕೃಷಿ ಮತ್ತು ತೋಟಗಾರಿಕೆ ಸಚಿವರು):–

ಅ) ರಾಜ್ಯದಲ್ಲಿ ರೈತರಿಗೆ ಅವಶ್ಯಕವಿದ್ದಷ್ಟು ಪೋಷಕಾಂಶಗಳನ್ನು ಒದಗಿಸುವ ರಸಗೊಬ್ಬರಗಳ ವಿತರಣೆ ಆಗುತ್ತಿದೆ.

ಆ) ಇಲ್ಲ. ಆದರೆ ಕಾಂಪ್ಲೆಕ್ಸ್ ರಸಗೊಬ್ಬರ ತಯಾರಕರು ಕಾಂಪ್ಲೆಕ್ಸ್ ಗೊಬ್ಬರವನ್ನು ಕೃಷಿ ಕೈಗಾರಿಕಾ ನಿಗಮ, ಮಾಧಾಟ ಮಹಾ ಮಂಡಲಿ ಮತ್ತು ಖಾಸಗಿಯವರಿಗೆ ವಿತರಣೆ ಮಾಡುವಾಗ ಯೂರಿಯಾ ಮತ್ತು ಡಿ.ಎ.ಪಿ. ಜೊತೆ ಲಿಂಕ್ ಮಾಡಿ ಮಾರಾಟ ಮಾಡುತ್ತಿರುವುದು ಮತ್ತು ಇದೇ ಪದ್ಧತಿಯನ್ನು ಕೃಷಿ ಕೈಗಾರಿಕಾ ನಿಗಮ ಮತ್ತು ಮಾರಾಟ ಮಹಾ ಮಂಡಲಿಯವರು, ಸಹ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಲಿಂಕ್ ಮಾಡಿ ಕಾಂಪ್ಲೆಕ್ಸ್ ಗೊಬ್ಬರ ಮಾರಾಟ ಮಾಡಬಾರದೆಂದು ಸಂಬಂಧಪಟ್ಟ ರಸಗೊಬ್ಬರ ತಯಾರಿಕೆಗೆ ಸೂಚನೆ ನೀಡಲಾಗಿದೆ.

ಈ) ಮಂಡ್ಯ ಜಿಲ್ಲೆಯಲ್ಲಿ ಫ್ಯಾಕ್ಟೊಫಾಸ್ 20ಖ20ಖ0 ಕಾಂಪ್ಲೆಕ್ಸ್ ಗೊಬ್ಬರವನ್ನು ಯೂರಿಯಾ ಮತ್ತು ಡಿ.ಎ.ಪಿ. ಗೊಬ್ಬರಗಳ ಜೊತೆ ಲಿಂಕ್ ಮಾಡಿ ಮಾರಾಟ ಮಾಡುತ್ತಿರುವುದಾಗಿ ಮತ್ತು ರಸಗೊಬ್ಬರ ವಿತರಣೆ ಬಗ್ಗೆ ಚರ್ಚೆಸಲು ಶಾಸಕರು ಕರೆದಿರುವ ಸಭೆಗಳಿಗೆ ತಯಾರಿಕರು, ಕೃಷಿ ಕೈಗಾರಿಕಾ ನಿಗಮ, ಮತ್ತು ಮಾರಾಟ ಮಹಾ ಮಂಡಳಿಯವರು ಹಾಜರಾಗುತ್ತಿಲ್ಲವೆಂದು ದೂರುಗಳು ಬಂದಿವೆ. ಈಗಾಗಲೇ ಫ್ಯಾಕ್ಟೊಫಾಸ್ ರಸಗೊಬ್ಬರವನ್ನು ಇತರೆ ಗೊಬ್ಬರಗಳ ಜೊತೆ ಲಿಂಕ್ ಮಾಡಿ ಮಾರಾಟ ಮಾಡಬಾರದೆಂದು ಮತ್ತು ಶಾಸಕರು ಕರೆಯುವ ಸಭೆಗಳಿಗೆ ತಪ್ಪದೆ ಹಾಜರಾಗಿ ರಸಗೊಬ್ಬರಗಳನ್ನು ಸಮರ್ಪಕವಾಗಿ ವಿತರಣೆ ಮಾಡುವಲ್ಲಿ ಸಹಕರಿಸಬೇಕೆಂದು ರಸಗೊಬ್ಬರ ತಯಾರಿಕರಿಗೆ ಸಹಕಾರ ಮಾರಾಟ ಮಂಡಲಿ ಮತ್ತು ಕೃಷಿ ಕೈಗಾರಿಕೆ ನಿಗಮದವರಿಗೆ ತಿಳಿಸಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆ ಬಗ್ಗೆ

525 ಶ್ರೀ ಎಲ್.ಆರ್ ಶಿವರಾಮೇಗೌಡ (ನಾಗಮಂಗಲ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆನ ದಿನಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೊಸ ಸರ್ಕಾರ ಬಂದ ಮೇಲೆ ವಿದ್ಯುತ್ ಅಭಿವೃದ್ಧಿಗೆ ಕೈಗೊಂಡಿರುವ ಕಾರ್ಯಕ್ರಮಗಳೇನು?

ಇ) ನಾಗಮಂಗಲ ತಾಲ್ಲೂಕಿನಲ್ಲಿ ದಿನಕ್ಕೆ 6 ಘಂಟೆಗಳ ವಿದ್ಯುತ್ ನಿಲುಗಡೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ರಾಜ್ಯದಲ್ಲಿನ ಪ್ರತಿ ತಾಲ್ಲೂಕಿಗೆ ಪ್ರಸಕ್ತ ವರ್ಷದಲ್ಲಿ ಎಷ್ಟೆಷ್ಟು ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಡುವ ಯೋಜನೆ ಆಳವಡಿಸಿಕೊಳ್ಳಲಾಗಿದೆ?

ಎ) ಈಗಾಗಲೇ ಮೇಲಿನ ಯೋಜನೆಯ ಅನ್ವಯ ಸದರಿ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಬೇಕಾಗಿರುವ ಕಂಬ, ವೈರು, ಇತ್ಯಾದಿಗಳನ್ನು ಸರಬರಾಜು ಮಾಡಲಾಗುವುದೆ?

ಶ್ರೀ ಎಸ್. ಬಂಗಾರಪ್ಪ, (ಮುಖ್ಯ ಮಂತ್ರಿಗಳು):–

ಅ) ಇಲ್ಲ. ಗ್ರಾಮಾಂತರ ಪ್ರದೇಶಗಳಿಗೆ ಹಿಂದೆ ಇದ್ದ 6 ಘಂಟೆಗಳ ಬದಲು ದಿನಾಂಕ: 1–6–90 ರಿಂದ ಹಾಲಿ 3 ಘಂಟೆಗಳ ಕಾಲ (ಬೆಳಿಗ್ಗೆ 6 ಘಂಟೆಯಿಂದ 9 ಘಂಟೆಯವರೆಗೆ) ಅಧಿಕೃತವಾಗಿ ವಿದ್ಯುತ್ ನಿಲುಗಡೆ ಮಾಡಲಾಗುತ್ತಿದೆ.

ಆ) ಇದನ್ನು ಅನುಬಂಧ 1ರಲ್ಲಿ ಕೊಡಲಾಗಿದೆ.

ಇ) ಇಲ್ಲ. 'ಅ' ಪ್ರಶ್ನೆಗೆ ಉತ್ತರಿಸಿರುವಂತೆ ನಾಗಮಂಗಲ ತಾಲ್ಲೂಕಿನಲ್ಲಿಯೂ ಕೂಡ ದಿನಕ್ಕೆ 3 ಘಂಟೆಗಳ ಕಾಲ ಅಧಿಕೃತವಾಗಿ ವಿದ್ಯುತ್ (ಬೆಳಿಗ್ಗೆ 6 ರಿಂದ 9 ಘಂಟೆಯತನಕ) ನಿಲುಗಡೆ ಮಾಡಲಾಗುತ್ತಿದೆ.

ಈ) ವರ್ಷದ ಪ್ರಾರಂಭದಲ್ಲಿ ಈ ವರ್ಷಕ್ಕೆ ನಿಗದಿ ಪಡಿಸಿದ 40,000 ಪಂಪುಸೆಟ್ಟುಗಳ ಗುರಿಯನ್ನು ಇತ್ತೀಚೆಗೆ 60,000ಕ್ಕೆ ಏರಿಸಲಾಗಿದೆ. 40,000 ಗುರಿಯಂತೆ ಪ್ರತಿ ತಾಲ್ಲೂಕಿಗೆ ಹಂಚಿಕೆ ಮಾಡಿರುವ ಪಂಪ್‌ಸೆಟ್ಟುಗಳ ಸಂಖ್ಯೆಯನ್ನು ಅನುಬಂಧ 2ರಲ್ಲಿ ಕೊಡಲಾಗಿದೆ. 60,000ಕ್ಕೆ ಏರಿಸಿರುವ ಗುರಿಯಂತೆ ತಾಲ್ಲೂಕುವಾರು ಹಂಚಿಕೆಯನ್ನು ಪರಿಷ್ಕರಿಸಲಾಗುತ್ತಿದೆ.

ಉ) ನಿಗದಿಪಡಿಸಿರುವ ಪಂಪ್‌ಸೆಟ್ಟುಗಳ ವಾರ್ಷಿಕ ಗುರಿಯನ್ನು ಸಾಧಿಸಲು ಬೇಕಾಗಿರುವ ಎಲ್ಲಾ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುವುದು.

ಅನುಬಂಧ – 1

ರಾಜ್ಯದ ವಿದ್ಯುತ್ ಅಭಿವೃದ್ಧಿಗಾಗಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ:

1. ಅನ್ವೇಷಣಾ ಕಾರ್ಯಗಳನ್ನು ತುರ್ತಾಗಿ ಪೂರೈಸಲು ಬಹಳಷ್ಟು ವಿಭಾಗಗಳನ್ನು ಆರಂಭಿಸಿರುತ್ತದೆ.

2. ಜಲ ಮತ್ತು ಶಾಖೋತ್ಪನ್ನ ಯೋಜನೆಗಳ ಯೋಜನಾ ವರದಿಯನ್ನು ಚುರುಕಾಗಿ ಸಿದ್ಧಪಡಿಸಲಾಗುತ್ತಿದೆ. ಮೈಸೂರು ಮತ್ತು ಹೊಸಪೇಟೆಗಳಲ್ಲಿ ಶಾಖೋತ್ಪನ್ನ ಕೇಂದ್ರಗಳನ್ನು ಮತ್ತು ಸರಪಾಡಿ ಹಾಗೂ ಶಿವನಸಮುದ್ರಗಳಲ್ಲಿ ಜಲವಿದ್ಯುತ್ ಯೋಜನೆಗಳಿಗಾಗಿ "ವಿದ್ಯುತ್ ಸರಬರಾಜಿನ ಕಾಯಿದೆ" (ELectricity Supply Act) ಅಡಿಯಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ಈ ಜಲವಿದ್ಯುತ್ ಯೋಜನೆಗಳ ಯೋಜನಾ ವರದಿಯನ್ನು ತಾಂತ್ರಿಕ ಆರ್ಥಿಕ ಒಪ್ಪಿಗೆಗಾಗಿ ಕೇಂದ್ರೀಯ ವಿದ್ಯುತ್ ಪ್ರಾಧಿಕಾರಕ್ಕೆ ಕಳಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮವು ಶಾಖೋತ್ಪನ್ನ ಯೋಜನೆಯ ಯೋಜನಾ ವರದಿಯನ್ನು ಕಳುಹಿಸಿದೆ. ಅದನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡಲು ಪರಿಶೀಲಿಸಲಾಗುತ್ತಿದೆ.

3. ಕರ್ನಾಟಕ ವಿದ್ಯುತ್ ನಿಗಮವು ಗಾಳಿ, ಸೌರಶಕ್ತಿ ಮತ್ತು ನಿರುಪಯುಕ್ತ ವಸ್ತುಗಳಿಂದ ವಿದ್ಯುತ್ ಉತ್ಪಾದನೆಗೆ ಒಂದು ಹೊಸದಾದ ವಿಭಾಗವನ್ನು ಪ್ರಾರಂಭಿಸಿರುತ್ತೆ.

4. ಕಾರ್ಯಾರಂಭ ಕಾರ್ಯ ಪೂರ್ಣಗೊಳಿಸಲು ಉತ್ಪಾದನೆಗೆ ಕಡಿಮೆ ಅವಧಿ ಸಾಕಾಗುವುದರಿಂದ ಬಹಳಷ್ಟು ಸಣ್ಣ (ಮಿನಿ) ಜಲವಿದ್ಯುತ್ ಕೇಂದ್ರಗಳನ್ನು ಕೈಗೆತ್ತಿಕೊಳ್ಳಲಾಗಿದೆ. ನಿರಂತರ ವಿದ್ಯುತ್ ಉತ್ಪಾದನೆಗಾಗಿ ಮುಖ್ಯವಾದ ವಿದ್ಯುತ್ ಉತ್ಪಾದನಾ ಕೇಂದ್ರವಾದ ಶರಾವತಿ ವಿದ್ಯುತ್ ಕೇಂದ್ರದ ಸುರಂಗಗಳ ಪ್ರಮುಖ ದುರಸ್ತಿ ಕಾರ್ಯಗಳನ್ನು ಮಾಡಲಾಗಿದೆ.

5. ಕರ್ನಾಟಕ ವಿದ್ಯುತ್ ನಿಗಮವು ಹೆಚ್ಚು ಸಾಲಗಳನ್ನು ಪಡೆದು ಹೆಚ್ಚು ಹೆಚ್ಚು ಬಂಡವಾಳವನ್ನು ವಿದ್ಯುತ್ ಯೋಜನೆಗಳಿಗೆ ತೊಡಗಿಸಲು ಅದರ ಶೇರು ಬಂಡವಾಳವನ್ನು ಮುನ್ನೂರು ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ.

6. ಹಾಲಿ ಕೆಲಸ ನಡೆಯುತ್ತಿರುವ ವಿದ್ಯುತ್ ಯೋಜನೆಗಳನ್ನು ತುರ್ತಾಗಿ ಪೂರ್ಣಗೊಳಿಸಲು, ಜೀವವಿಮಾ ನಿಗಮ, ಪವರ್ ಫೈನಾನ್ಸ್ ಕಾರ್ಪೋರೇಷನ್, ಐ.ಡಿ.ಬಿ.ಐ. ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಮತ್ತು ಹೌಸಿಂಗ್ ಡೆವಲಪ್‌ಮೆಂಟ್ ಫೈನಾನ್ಸ್ ಕಾಪೊರೇಷನ್ ಮುಂತಾದ ಸಂಸ್ಥೆಗಳಿಂದ ಕರ್ನಾಟಕ ವಿದ್ಯುತ್ ನಿಗಮವು ಪಡೆಯುತ್ತಿರುವ ಹೆಚ್ಚಿನ ಸಾಲಗಳಿಗೆ ಸರ್ಕಾರವು ಗ್ಯಾರಂಟಿ ನೀಡುತ್ತಿದೆ.

7. . ರಾಯಚೂರು ಶಾಖೋತ್ಪನ್ನದ 4ನೇ ಘಟಕಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆಯಲಾಗಿದೆ.

ಒಟ್ಟು 904 ಮೆ.ವಾ. ಸಾಮರ್ಥ್ಯವುಳ್ಳ, ಈಗ ಕೆಲಸ ನಡೆಯುತ್ತಿರುವ ಯೋಜನೆಗಳಾದ ಕಾಳಿನದಿ 2ನೇ ಹಂತ, ವರಾಹಿ ಯೋಜನೆಯ ಉಳಿದ ಕೆಲಸಗಳು, ಘಟಪ್ರಭಾ ಯೋಜನೆ, ರಾಯಚೂರು ಶಾಖೋತ್ಪನ್ನ 3ನೇ ಘಟಕ, ಮಲ್ಲಾಪುರ ಮಿನಿ ಜಲ ವಿದ್ಯುತ್ ಯೋಜನೆ, ಗೇರುಸೊಪ್ಪ ಯೋಜನೆ ಇವುಗಳ ಕೆಲಸಗಳನ್ನು ಇದೇ ವೇಗದಲ್ಲಿ ಮುಂದುವರಿಸಲಾಗುವುದು. ಇದರಲ್ಲಿ 115 ಮೆ.ವಾ. ಸಾಮರ್ಥ್ಯದ ವರಾಹಿ 2ನೇ ಘಟಕದ ವಿದ್ಯುತ್ ಉತ್ಪಾದನೆಯ ಪರೀಕ್ಷಣಾ ಕಾರ್ಯಾಚರಣೆಯನ್ನು (ಟ್ರಯಲ್ ರನ್) ಮಾಡಲಾಗಿದೆ. ಇದರಿಂದ ರಾಜ್ಯದ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ 2760 ಮೆ.ವಾ.ನಷ್ಟು ಮತ್ತು ಜಲವಿದ್ಯುತ್ ಉತ್ಪಾದನಾ ಸಾಮರ್ಥ್ಯ 2340 ಮೆ.ವಾ.ನಷ್ಟು ಆಗಿದೆ. ಇದಲ್ಲದೆ, 8ನೇ ಮತ್ತು 9ನೇ ಯೋಜನೆಯಲ್ಲಿ ಇನ್ನೂ ಕೆಲವು ಜಲ ಮತ್ತು ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ.

ANNEXURE - II

Sl.	District/Taluk	Annual target fixed for energisation of IP set during 1990–91
1	2	3
BANGALORE- DISTRICT:		
1.	Anekal	300
2.	Bangalore North	170
3.	Bangalore South	165
4.	Channapatna	585
5.	Devanahalli	250
6.	Doddaballapur	375
7.	Hoskote	450
8.	Kanakapura	680
9.	Magadi	265
10.	Nelamangala	180
11.	Ramanagaram	180
	Total	3600

1	2	3
BELGAUM -DISTRICT		
1.	Athani	740
2.	Belgaum	430
3.	Chikkodi	400
4.	Gokak	360
5.	Hukkeri	-
6.	Khanapur	320
7.	Parasgad	510
8.	Raibag	100
9.	Ramadurga	250
10.	Sampagaon	640
	Total	3750
BELLARY- DISTRICT		
1.	Bellary	100
2.	Hadagali	300
3.	Haraphanahalli	300
4.	Hospet	50
5.	Kudligi	130
6.	Mallapur	150
7.	Sandur	50
8.	Siruguppa	70
	Total	1150
BIDAR -DISTRICT:		
1.	Aurad	110
2.	Basavakalyan	590
3.	Bhalki	220
4.	Bidar	180
5.	Humnabad	200
	Total	1300
BIJAPUR -DISTRICT		
1.	Badami	95
2.	Bagalkot	75
3.	Bagevadi	220
4.	Bijapur	340
5.	Bilgi	125
6.	Hungund	80
7.	Indi	550
8.	Jamakhandi	325
9.	Muddebihal	160
10.	Mudhol	300
11.	Sindgi	230
	Total	2500

1	2	3
CHICKMAGALUR DISTRICT		
1.	Chickmagalur	165
2.	Kadur	380
3.	Koppa	75
4.	Mudigere	40
5.	N.R. Pura	25
6.	Sringeri	25
7.	Tarikeri	90
	Total	800
CHITRADURGA DISTRICT		
1.	Challakere	315
2.	Chitradurga	285
3.	Davangere	475
4.	Harihar	350
5.	Hiriyur	320
6.	Holalkere	210
7.	Hosadurga	220
8.	Jagalur	240
9.	Molakalmuru	80
	Total	2500
DAKSHINA KANNADA DISTRICT		
1.	Belthangadi	410
2.	Bantwal	380
3.	Coondapur	500
4.	Karkala	350
5.	Mangalore	110
6.	Puttur	800
7.	Sullia	480
8.	Udupi	570
	Total	3600
DHARWAR DISTRICT		
1.	Byadagi	120
2.	Dharwar	130
3.	Gadag'	75
4.	Hangal	240
5.	Haveri	340
6.	Hirekerur	320
7.	Hubli	70
8.	Kalghatagi	250
9.	Kundagol	30
10.	Mundargi	90

11.	Nargund	20
12.	Navalgund	30
13.	Ranebennur	280
14.	Ron	85
15.	Savanur	160
16.	Shiggaon	110
17.	Sirahatti	150
	Total	2500

GULBARGA DISTRICT

1.	Afzalpur	240
2.	Alland	275
3.	Chincholi	150
4.	Chitapur	145
5.	Gulbarga	350
6.	Jewargi	140
7.	Sedam	50
8.	Shahapur	45
9.	Shorapur	30
10.	Yadgir	75
	Total	1500

HASSAN DISTRICT

1.	Alur	30
2.	Arkalgud	130
3.	Arasikere	650
4.	Belur	180
5.	C.R. Patna	875
6.	H.N. Pura	40
7.	Hassan	200
8.	Sakaleshpur	45
	Total	2150

KODAGU DISTRICT

1.	Mercara	55
2.	Somavarpet	65
3.	Virajpet	80
	Total	200

KOLAR DISTRICT

1.	Bagepalli	125
2.	Bangarpet	285
3.	Chickaballapur	125
4.	Chintamani	250
5.	Gowribidanur	150
6.	Gudibanda	50

7.	Kolar	520
8.	Malur	430
9.	Mulbagal	250
10.	Siddlaghatta	350
11.	Srinivasapura	465
	Total	3000

MANDYA DISTRICT

1.	K.R. Pet	330
2.	Maddur	340
3.	Malavalli	300
4.	Mandya	125
5.	Nagamangala	210
6.	Pandavapura	60
7.	Srirangapatna	35
	Total	1400

MYSORE DISTRICT

1.	C.R. Nagar	400
2.	Gundlupet	400
3.	H.D. Kote	160
4.	Hunsur	250
5.	Kollegal	300
6.	K.R. Nagar	40
7.	Mysore	150
8.	Nanjangud	250
9.	Periyapatna	100
10.	T. Narasipura	160
11.	Yalandur	50
	Total	2250

RAICHUR DISTRICT

1.	Deodurg	150
2.	Gangavathi	300
3.	Koppal	140
4.	Kushtagi	185
5.	Lingasugar	290
6.	Manvi	300
7.	Raichur	160
8.	Sindhanur	100
9.	Yelburga	225
	Total	1850

SHIMOGA DISTRICT

1.	Bhadravathi	100
2.	Channagiri	300
3.	Honnali	250

4.	Hosanagar	50
5.	Sagar	85
6.	Shikaripur	200
7.	Shimoga	150
8.	Sorab	70
9.	Thirthahalli	95
	Total	1300

TUMKUR DISTRICT

1.	C.N. Halli	500
2.	Gubbi	700
3.	Koratagere	250
4.	Kunigal	150
5.	Madhugiri	280
6.	Pavagada	170
7.	Sira	150
8.	Tiptur	740
9.	Tumkur	340
10.	Turuvekere	220
	Total	3500

UTTARA KANNADA DISTRICT

1.	Ankola	55
2.	Bhatkal	40
3.	Haliyal	35
4.	Honnavar	220
5.	Karwar	30
6.	Kumta	120
7.	Mundgod	40
8.	Siddapur	160
9.	Sirsi	270
10.	Supa	40
11.	Yellapur	140
	Total	1150
	STATE TOTAL	40,000

ಉ.ಕನ್ನಡ ಜಿಲ್ಲೆಯ ಕೈಗಾ ನೌಕಾ ನೆಲೆಯಲ್ಲಿನ ಜನರ ಪುನರ್ವಸತಿ ಬಗ್ಗೆ

358. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 1–5–90 ರಿಂದ 30–9–90 ವರೆಗೆ ಎಷ್ಟು ಕೈಗಾ ನೌಕಾನೆಲೆಯ ಪುನರ್ವಸತಿ ಸಭೆಗಳು ನಡೆದಿವೆ ಹಾಗೂ ಯಾವ ಯಾವ ದಿನಾಂಕಗಳಂದು;

ಆ) ನೌಕಾನೆಲೆಯಿಂದ ನಿರಾಶ್ರಿತರಾದ ಜನರ ಪುನರ್ವಸತಿಗಾಗಿ ಸರ್ಕಾರ ಇದುವರೆವಿಗೂ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ ಹಾಗೂ ಇದುವರೆವಿಗೂ ಎಷ್ಟು ಜನ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಲಾಗಿದೆ;